# ಕರ್ನಾಟಕ ಸರ್ಕಾರ

ಸಂ : ಎ.ಸಿ.ಎ./ಡಿಯುಡಿಸಿ/ಸಿ.ಆರ್- /2010-11

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೀದರ,
ದಿನಾಂಕ : 12.05.2010.

**- : ಅಲ್ಪಾವಧಿ ಟೆಂಡರ್ ಪ್ರಕಟಣೆ : -**

***

ಎ.ಸಿ.ಎ/ಪ್ರವಾಸೋದ್ಯಮ ಅನುದಾನದಡಿಯಲ್ಲಿ ಬೀದರ ಕೋಟೆಯ ಭೋಮಗೊಂಡೇಶ್ವರ ಕೆರೆ ಹತ್ತಿರ ಕಲ್ಲು ಗೋಡೆಯ ಪುನರ ನಿರ್ಮಾಣ ಮತ್ತು ಅಲಿ ಬರೀದ ಉದ್ಯಾನವನದಲ್ಲಿ ಪಾದಚಾರಿ ರಸ್ತೆ ನಿರ್ಮಿಸುವ ಸಲುವಾಗಿ ಕರ್ನಾಟಕ ಲೋಕೋಪಯೋಗಿ ಸಂಹಿತೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಕ್ಟ 2000 ಮತ್ತು ಅದರ ಇತ್ತಿಚಿನ ತಿದ್ದುಪಡಿಗಳಂತೆ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಹಾಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಿಂದ ಐಟಂವಾರು ದರ ಟೆಂಡರನ್ನು ದ್ವಿ-ಪ್ರತಿಯಲ್ಲಿ ಅಹ್ವಾನಿಸಲಾಗಿದೆ. ಟೆಂಡರಗಳನ್ನು ಕಚೇರಿ ಸಮಯದಲ್ಲಿ ನಿಗದಿ ಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ಗುತ್ತಿಗೆದಾರರು ಖುದ್ದಾಗಿ ಇಲ್ಲವೆ ಅವರ ಪ್ರತಿನಿಧಿಗಳ ಮುಖಾಂತರ ಪಡೆದು ಸಲ್ಲಿಸಬಹುದು.

**- : ಟೆಂಡರ ನಡುವಳಿಗಳ ದಿನಾಂಕಗಳು ಮತ್ತು ವೇಳಾ ಪಟ್ಟಿ ಕೆಳಗಿನಂತಿದೆ : -**

1. ಖಾಲಿ ಟೆಂಡರ ಶೆಡ್ಯೂಲಗಳು ವಿತರಿಸುವ ಕೊನೆಯ ದಿನಾಂಕ ಮಧ್ಯಾಹ್ನ 1:30 ಗಂಟೆವರೆಗೆ : 24.05.2010
2. ಭರ್ತಿ ಮಾಡಿದ ಮೋಹರಬಂದ ಟೆಂಡರ ಶೆಡ್ಯೂಲಗಳೂ ಸ್ವೀಕರಿಸುವ ಕೊನೆಯ ದಿನಾಂಕ ಮಧ್ಯಾಹ್ನ : 12:30 ಗಂಟೆ ವರೆಗೆ : 25.05.2010
3. ಟೆಂಡರನ್ನು ತೆರೆಯುವ ಕೊನೆಯ ದಿನಾಂಕ ಮಧ್ಯಾಹ್ನ : 1:00 ಗಂಟೆಗೆ : 25.05.2010

**ಕಾಮಗಾರಿಗಳ ವಿವರ ಮತ್ತು ಅರ್ಜಿದಾರರಿಗೆ ಬೇಕಾಗುವ ಅರ್ಹತೆಯ ವಿವರ ಕೆಳಗಿನಂತಿದೆ.**

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರಿಗೆ ನಿಗದಿಪಡಿಸಲಾದ ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ರೂ.ಗಳಲ್ಲಿ | ಟೆಂಡರ ಡಾಕುಮೆಂಟ್ಸ್ ಬೆಲೆ ರೂ. ಗಳಲ್ಲಿ | ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸುವ ಅವಧಿ ಹಾಗೂ ಗುತ್ತಿಗೆದಾರರ ದರ್ಜೆ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೀದರ ಕೋಟೆಯ ಭೋಮ ಗೊಂಡೇಶ್ವರ ಕೆರೆ ಹತ್ತಿರ ಕಲ್ಲು ಗೋಡೆಯ ಪುನರ ನಿರ್ಮಾಣ ಮಾಡುವುದು | 8.65 | 21625 /- | 4000/+ ತೆರಿಗೆ | 45 ದಿವಸಗಳು ನೊಂದಾಯಿತ ಅರ್ಹ ಗುತ್ತಿಗೆದಾರು |
| 2 | ಅಲಿ ಬರೀದ ಉದ್ಯಾನವನದಲ್ಲಿ ಪಾದಚಾರಿ ರಸ್ತೆ ಮಾಡುವುದು | 5.55 | 13875/- | 3000/+ ತೆರಿಗೆ | 45 ದಿವಸಗಳು ನೊಂದಾಯಿತ ಅರ್ಹ ಗುತ್ತಿಗೆದಾರರು |

**ಷರತ್ತುಗಳು :-**

1. ಕಾಮಗಾರಿಗಳಿಗೆ ಬೇಕಾಗಿರುವ ಇ.ಎಂ.ಡಿ. ಮೊತ್ತ ಹಾಗೂ ಟೆಂಡರ ಡಾಕ್ಯುಮೆಂಟಿನ ಬೆಲೆಯನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ತೆಗೆದು (Project Director DUDC BIDAR) ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ ರವರ ಹೆಸರಿನಲ್ಲಿ ಕಡ್ಡಾಯವಾಗಿ ಪಡೆದು ಖಾಲಿ ಟೆಂಡರ ಪುಸ್ತಕಗಳಿಗೆ ಅರ್ಜಿ ಸಲ್ಲಿಸುವಾಗ ಕೊಡತಕ್ಕದು.
2. ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಅಂಗಿಕರಿಸುವ / ತಿರಸ್ಕರಿಸುವ ಹಕ್ಕು ಕಾಯ್ದಿರಿಸಿದೆ.

ಪುಟ 2ಕ್ಕೆ...

ಸಂ : ಎ.ಸಿ.ಎ./ಡಿಯುಡಿಸಿ/ಸಿ.ಆರ್- /2010-11 ದಿನಾಂಕ : 12.05.2010

3. ಖಾಲಿ ಟೆಂಡರ ಪುಸ್ತಕಗಳ ಬೆಲೆ ಯಾವುದೇ ಸ್ಥಿತಿಯಲ್ಲಿ ಹಿಂತಿರುಗಿಸಲಾಗುವಂತಿಲ್ಲ.
4. ಗುತ್ತಿಗೆದಾರರು ಕಾಮಗಾರಿಗಳನ್ನು ಪಾರದರ್ಶಕತೆ ನಿಯಮದಡಿ ಮಾಡತಕ್ಕದು.
5. ಅಂಚೆಯ ಮೂಲಕ ಟೆಂಡರ ಪುಸ್ತಕಗಳನ್ನು ನೀಡಲಾಗುವುದಿಲ್ಲ ಮತ್ತು ಸ್ವೀಕರಿಸಲಾಗುವುದಿಲ್ಲ.
6. ಷರತ್ತುಗಳು ಉಲ್ಲಂಘನೆ ಮಾಡಿದ್ದಲ್ಲಿ ಟೆಂಡರಗಳನ್ನು ತಿರಸ್ಕರಿಸಲಾಗುವುದು.
7. ಖಾಲಿ ಟೆಂಡರ ಪುಸ್ತಕಗಳನ್ನು ಪಡೆಯಲು ಇಚ್ಛಿಸಿರುವ ಗುತ್ತಿಗೆದಾರರು ಅರ್ಜಿಯ ಜೊತೆಯಲ್ಲಿ ಖಾಲಿ ಟೆಂಡರ ಪುಸ್ತಕಗಳ (ಹಿಂತಿರುಗಿಸಲಾಗದ) ಬೆಲೆಯನ್ನು, ಗುತ್ತಿಗೆದಾರರು ನೊಂದಣಿ ಪ್ರಮಾಣ ಪತ್ರದ ಪ್ರತಿಯನ್ನು ಮತ್ತು ಇತ್ತಿಚಿನ ಆದಾಯ ತೆರಿಗೆ ಪಾವತಿ, ಹಾಗೂ ಮಾರಾಟ ತೆರಿಗೆ ಪಾವತಿ ದಸ್ತಾವೇಜುಗಳ ಪ್ರತಿಗಳನ್ನು ಲಗತ್ತಿಸತಕ್ಕದು.
8. ಪ್ರಮಾಣ ಪತ್ರಗಳನ್ನು ಲಗತ್ತಿಸದೇ ಇರುವ ಟೆಂಡರಗಳನ್ನು ತಿರಸ್ಕರಿಸಲಾಗುವುದು.
9. ಟೆಂಡರಿನ ತಾಂತ್ರಿಕ ಬಿಡ್ ಜೊತೆಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲೆಗಳು ನೋಟರಿ ಅಥವಾ ಗೆಜೆಟೆಡ ಅಧಿಕಾರಿಗಳಿಂದ ಮೇಲ ರುಜು ಮಾಡಿರಬೇಕು. ಮೂಲ ದಾಖಲಾತಿಗಳನ್ನು ಪರಿಶೀಲನೆಗಾಗಿ ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿನಾಂಕದಂದು ಅಥವಾ ನಿಗಧಿತ ದಿನಾಂಕದಂದು ಗುತ್ತಿಗೆದಾರರು ಈ ಕಚೇರಿಗೆ ಹಾಜರು ಪಡಿಸಬೇಕು. ಇಲ್ಲದಿದ್ದಲ್ಲಿ ಅಂತಹ ಟೆಂಡರ ತಿರಸ್ಕರಿಸಲಾಗುವುದು.
10. ಟೆಂಡರ ಶೆಡ್ಯೂಲನ್ನು ಒಂದು ಸೀಲ್ ಮಾಡಿದ ಕವರನಲ್ಲಿಟ್ಟು ಅದರ ಮೇಲೆ ಟೆಂಡರನ್ನು ಯಾವ ಕಾಮಗಾರಿಗೆ ಸಲ್ಲಿಸಿದೆ ಎಂದು ಮತ್ತು ಇದನ್ನು ಸಲ್ಲಿಸಿದ ಗುತ್ತಿಗೆದಾರರ ಪೂರ್ಣ ವಿಳಾಸ ಇವುಗಳನ್ನು ಕವರ ಮೇಲೆ ಬರೆಯತಕ್ಕದ್ದು.
11. ಸದರಿ ಗುತ್ತಿಗೆದಾರರು ಟೆಂಡರ ಸಮಯದಲ್ಲಿ ಟೆಂಡರ ಮೊತ್ತಕಿಂತ ಕಡಿಮೆ ದರ ತುಂಬಿದಲ್ಲಿ ಸದರಿ ವ್ಯತ್ಯಾಸ ಮೊತ್ತದ ಡಿ.ಡಿ. ರೂಪದಲ್ಲಿ ಶೆಡ್ಯೂಲ್ಡ "ಬಿ" ಜೊತೆಯಲ್ಲಿ ಲಗತ್ತಿಸಿ ಹಾಕಬೇಕು. ಇಲ್ಲದಿದಲ್ಲಿ ಟೆಂಡರ ತಿರಸ್ಕರಿಸಲಾಗುವುದು.
12. ಟೆಂಡರ ಪಟ್ಟಿಗೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇರಿಸಲಾಗುವುದು ಕಾರಣ ಗುತ್ತಿಗೆದಾರರು ಮೇಲೆ ತಿಳಿಸಿದ ನಿಗಧಿತ ದಿನಾಂಕ ಮತ್ತು ಸಮಯಕ್ಕೆ ತಮ್ಮ ಟೆಂಡರಗಳನ್ನು ಹಾಕುವುದು.
13. ಗುತ್ತಿಗೆದಾರರು ಹಿಂದಿನ 2 ವರ್ಷ 2007-08 ಮತ್ತು 2008-09 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಟೆಂಡರಿಗಿಟ್ಟ ಕಾಮಗಾರಿ ಮೊತ್ತಕ್ಕೆ ಕಡಿಮೆ ಇಲ್ಲದಂತೆ ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಪ್ರಮಾಣ ಪತ್ರವನ್ನು ತಾಂತ್ರಿಕ ಬಿಡ್‌ನೊಂದಿಗೆ ಲಗತ್ತಿಸತಕ್ಕದು.
14. ಟೆಂಡರ ಡಾಕುಮೆಂಟಯನ್ನು ಸಲ್ಲಿಸುವಾಗ ಈ ಕಾಮಗಾರಿಗೆ ನಿರ್ಮಿಸಲು ಬೇಕಾಗುವ ಯಂತ್ರೋಪಕರಣಗಳನ್ನು ಸ್ವಂತ ಹೊಂದಿರುವ ಬಗ್ಗೆ ಅಥವಾ ಲೀಸ್ ಇತ್ತೀಚಿನ ಕರಾರು ಪತ್ರ (1 ತಿಂಗಳ ಮೀರದಂತೆ) ಆಧಾರದ ಮೇಲೆ ಪಡೆದಿರುವ ಬಗ್ಗೆ ಸೂಕ್ತ ದಾಖಲೆಗಳನ್ನು ತಾಂತ್ರಿಕ ಬಿಡ್‌ನೊಂದಿಗೆ ಸಲ್ಲಿಸತಕ್ಕದ್ದು.
15. ಗುತ್ತಿಗೆದಾರರು ಟೆಂಡರಿಗಿಟ್ಟ ಮೊತ್ತಕ್ಕೆ ಶೇಕಡ 60% ಪ್ರತಿಶತ ಮೌಲ್ಯಗಿಂತ ಕಡಿಮೆ ಇರದಂತೆ ಇದೇ ತರಹದ ಒಂದು ಕಾಮಗಾರಿಯ ಕೆಲಸವು ಪೂರ್ಣಗೊಳಿಸಿದವರಾಗಿರಬೇಕು. ಹಾಗೂ ಕೆಲಸ ನಿರ್ವಹಿಸಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ತಾಂತ್ರಿಕ ಬಿಡನೊಂದಿಗೆ ಲಗತ್ತಿಸತಕ್ಕದ್ದು.
16. ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸಾಮಗ್ರಿಗಳ ಗುಣ ನಿಯಂತ್ರಣ ಪರೀಕ್ಷೆಗಳನ್ನು ಪೂರೈಸಿದ ಸಾಮಗ್ರಿಗಳು ಮಾತ್ರ ಕೆಲಸಕ್ಕೆ ಉಪಯೋಗಿಸತಕ್ಕದ್ದು. ಹಾಗೂ ಗುಣ ನಿಯಂತ್ರಣ ಪರೀಕ್ಷೆ ಫಲಿತಾಂಶದ ವರದಿ ಸಲ್ಲಿಸುವುದು.
17. ಕಾಮಗಾರಿ ನಡೆಯುವ ಸ್ಥಳದಲ್ಲಿ ಕಾಮಗಾರಿಯ ಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಅಳವಡಿಸತಕ್ಕದ್ದು.
18. ಹೆಚ್ಚಿನ ಮಾಹಿತಿಗಾಗಿ ಎಲ್ಲಾ ಗುತ್ತಿಗೆದಾರರು ಕಚೇರಿ ಸಮಯದಲ್ಲಿ ಟೆಂಡರ ಬಗ್ಗೆ ಜಿಲ್ಲಾ ನಗರಾಭಿವೃದ್ಧಿ ಕೋಶ ತಾಂತ್ರಿಕ ವಿಭಾಗದಿಂದ ಮಾಹಿತಿ ಪಡೆಯಬಹುದು.
19. ಮೇಲೆ ನಮೂದಿಸಿದ ಯಾವುದಾದರೂ ದಿನಾಂಕ : ಸಾರ್ವಜನಿಕ ರಜೆ ಎಂದು ಘೋಷಿಸಿದರೆ ಅದರ ಮುಂದಿನ ದಿನ ವ್ಯವಹಾರ ದಿನವೆಂದು ಪರಿಗಣಿಸಲಾಗುವುದು.

ಪುಟ ತಿರುಗಿಸಿ...

ಸಂ : ಎ.ಸಿ.ಎ./ಡಿಯುಡಿಸಿ/ಸಿ.ಆರ್- /2010-11 ದಿನಾಂಕ : 12.05.2010

20. ಕಾಮಗಾರಿಗಳ ಕೆಲಸಗಳನ್ನು ನಡೆಯುವಾಗ ಮೂರನೇ ಪಾರ್ಟಿಯವರಿಂದ ಹಂತ ಹಂತವಾಗಿ ತಪಾಸಣೆ ಕೈಗೊಳ್ಳಲಾಗುವುದು.
21. ಕಾಮಗಾರಿ ಕೆಲಸ ಮಾಡಿದ ನಂತರ 70% ಹಣ ಪಾವತಿ ಮಾಡಲಾಗುವುದು ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ ಮೂರನೇ ಪಾರ್ಟಿಯ ತಪಾಸಣೆ ಮಾಡಿ ಇವರಿಂದ ಕೆಲಸದ ಗುಣಮಟ್ಟದ ಬಗ್ಗೆ ವರದಿ ಬಂದ ಬಳಿಕ 30% ಬಿಲ್ಲು ಪಾವತಿಸಲಾಗುವುದು.
22. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ಲನ್ನು ಪಾವತಿಸಿದ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ಪೈಕಿ ವಾರ್ಷಿಕ ನಿರ್ವಹಣೆಯನ್ನು ಮೂರು ವರ್ಷದ ಅವಧಿಗೆ ಗುತ್ತೆದಾರರೆ ಯಾವುದೇ ಹೆಚ್ಚಿನ ವೆಚ್ಚವಿಲ್ಲದೇ ನಿರ್ವಹಿಸತಕ್ಕದ್ದು.
23. ಜಿಲ್ಲಾಧಿಕಾರಿಗಳ ಕಾರ್ಯಾಲಯದ ವೆಬ್‌ಸೈಟ **www.bidar.nic.in** ನಲ್ಲಿ ಕೂಡ ಸದರಿ ಟೆಂಡರ ಬಗ್ಗೆ ಮಾಹಿತಿಯನ್ನು ಪಡೆಯಬಹುದು.

ಜಿಲ್ಲಾಧಿಕಾರಿಗಳು
ಬೀದರ.

ಪ್ರತಿಯನ್ನು :-

1. ಜಿಲ್ಲಾ ಟೆಂಡರ ಬುಲೇಟ್‌ನ ಅಧಿಕಾರಿಗಳು ಬೀದರ ರವರಿಗೆ ಅಧಿಸೂಚನೆ ಪ್ರಕಟಿಸಲು ಸೂಚಿಸಿದೆ.
2. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು ಬೀದರ ರವರ ಮಾಹಿತಿಗಾಗಿ.
3. ಸಹಾಯಕ ಆಯುಕ್ತರು/ತಹಸೀಲ್ದಾರರು ಬೀದರ ರವರಿಗೆ ಮಾಹಿತಿಗಾಗಿ.
4. ಹಿರಿಯ ಸಂರಕ್ಷಣಾ ಸಹಾಯಕರು ಭಾರತೀಯ ಪುರತತ್ವ ಇಲಾಖೆ ಬೀದರ ರವರ ಮಾಹಿತಿಗಾಗಿ.
5. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ ರವರ ಮಾಹಿತಿಗಾಗಿ.
6. ಕಾರ್ಯನಿರ್ವಾಹಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ ರವರಿಗೆ ಮಾಹಿತಿಗಾಗಿ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ ಇವರಿಗೆ ಸೂಕ್ತಕ್ರಮಕ್ಕಾಗಿ.
8. ಕಚೇರಿಯ ನಾಮ ಫಲಕಕ್ಕೆ.

ಜಿಲ್ಲಾಧಿಕಾರಿಗಳು
ಬೀದರ.